



### ಮಾಹಿತಿ ಪೂರ್ಣ ಚಿತ್ರಬರಹ

ಸೆ.20ರ 'ಸುಧಾ' ಮುಖಪುಟ ಚಿತ್ರಲೇಖನ 'ಅಪೂರ್ವ ಜಲಧಾರೆ' (ಬರಹ: ಬಿ.ವಿ.ಪ್ರಕಾಶ್) ಉತ್ತಮ ಮಾಹಿತಿ ಒಳಗೊಂಡಿದ್ದು, ಸಕಾಲಿಕವಾಗಿದೆ. ಜಲಪಾತಗಳಿಗೆ ತಲುಪುವ ಮುನ್ನ ವಹಿಸಬೇಕಾದ ಎಚ್ಚರಿಕೆಗಳು ಲೇಖನದ ಸೊಬಗನ್ನು ಹೆಚ್ಚಿಸಿದೆ.

-ರಾಜಶೇಖರ ಗೌಡ, ಕೊಟ್ಟೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಪ್ರಭುಪ್ರಸಾದ್ ನಡುತೋಟ, ಶೃಂಗೇರಿ

### ಕನ್ನಡಿಗನ ಬೆಳ್ಳಿ ಜಂಪ್

ಪಾದರಕ್ಷೆಯಿಲ್ಲದ ಬರಿಗಾಲು, ಕುತ್ತಿಗೆಯಲ್ಲೊಂದು ತಾಯಿತ, ಕಾಲಿಗೆ ದೃಷ್ಟಿದಾರ, ಸಾಮಾನ್ಯ ದಿರುಸಿನ ಹಳ್ಳಿಗ ಗಿರೀಶ್, ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ಕನ್ನಡಿಗನೆನ್ನಲು ನಮಗೆ ಹೆಮ್ಮೆ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ/ ಪಿ.ಎಸ್. ನಾರಾಯಣ ಭಟ್, ಕೊಯಿಲ

### ಮಾರ್ಮಿಕ ವಿಶ್ಲೇಷಣೆ

ಮೂರು ದಾರಿಗಳ ಬಗ್ಗೆ ವಿಚಾರ ಲಹರಿಯಲ್ಲಿ ವೈನತೇಯ ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

-ಟಿ.ಎನ್. ಸರಸ್ವತಿ, ತುರುವೇಕೆರೆ

### ಕಣ್ಣುಗಳು ತೇವಗೊಂಡವು

ತಂದೆ–ತಾಯಿ ವೈದ್ಯರಾಗಿದ್ದರೂ, ತಮ್ಮ ಕಣ್ಮರೆಯಾಗುತ್ತಿದ್ದ ಮಗಳನ್ನು ಉಳಿಸಿಕೊಳ್ಳಲಾಗದ ಸ್ಥಿತಿ! ಡಾ. ಎಚ್.ಗಿರಿಜಮ್ಮ ಅವರ 'ಕಾಲನೇಮಿಯ ಕರುಣೆ' ಕಥೆ ಓದಿದ ಮೇಲೆ ಕಣ್ಣುಗಳು ತೇವಗೊಂಡವು.

-ಎಸ್. ಚನ್ನಪ್ಪ, ಮೈಸೂರು/ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಸಂಗೀತ ಋಷಿ

ಇಳಯರಾಜ ಎಂಬ ಸಂಗೀತ ಋಷಿಯ ಉಮಾ ಅನಂತ್‌ರ ಸಂದರ್ಶನ ಪ್ರಕಟಿಸಿದ್ದಕ್ಕಾಗಿ 'ಸುಧಾ'ಗೆ ಅಭಿನಂದನೆಗಳು.

- ಜಿ.ಎಸ್. ಆರ್ಯಮಿತ್ರ, ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ವಿಷಕಾರಿ ಕ್ರಿಮಿನಾಶಕ

ಎಂಡೋಸಲ್ಫಾನ್ ಕ್ರಿಮಿನಾಶಕ ವಿಷದ ಬಗ್ಗೆ 'ಸುಧಾ'ದಲ್ಲಿ ಪ್ರಕಟವಾದ ಹರೀಶ್ ಹಳೆಮನೆ ಅವರ ಲೇಖನ ಕನ್ನಡಿಗರ ಕಣ್ತೆರೆಸುವಂತಿದೆ. ಆದರೆ ಲೇಖಕರು ಕೇವಲ ಕೇರಳ ರಾಜ್ಯದ ಎಂಡೋಸಲ್ಫಾನ್ ಪೀಡಿತರ ಬಗ್ಗೆ ಹೇಳಿದ್ದಾರೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕೊಕ್ಕಡ, ಸುಬ್ರಮಣ್ಯ ಇತರೆ ಕಡೆಯ ಜನರು ಎಂಡೋಸಲ್ಫಾನ್ ವಿಷದಿಂದ ಬಾಧಿತರಾಗಿದ್ದು, ಅವರಿಗೆ ನಮ್ಮ ರಾಜ್ಯ ಸರ್ಕಾರದಿಂದ ಯಾವುದೇ ನೆರವು ಸಿಗುತ್ತಿಲ್ಲ. ಇದನ್ನೂ ಲೇಖಕರು ಹೇಳಬಹುದಿತ್ತು.

ವಿಷಕಾರಿಯಾದ ಕ್ರಿಮಿನಾಶಕಗಳನ್ನು ರೈತರು ಬೆಳೆಗಳನ್ನು ಕಾಪಾಡುವ ದೃಷ್ಟಿಯಿಂದ ಬಳಸುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ. ಈ ಬಗ್ಗೆ ಜನಜಾಗೃತಿ ಮೂಡಿಸುವ ಲೇಖನಗಳು 'ಸುಧಾ'ದಲ್ಲಿ ಹೆಚ್ಚು ಪ್ರಕಟವಾಗಲಿ.

-ವೈ.ಯಂ. ಚಂದ್ರಶೇಖರ್, ಕೂಡಿಗೆ

### ಚರಿತ್ರೆ ಕಥೆಯಾದ ಬಗೆ

ಸೆ.13ರ ಸಂಚಿಕೆಯಲ್ಲಿ ಬಿ.ಆರ್.ಪೋಲೀಸ್ ಪಾಟೀಲರ 'ಕೆಂಡ ಸಂಪಿಗೆ' ಕಥೆ ವೀರೇಶ ಶರಣರ ಬದುಕಿನ ಕುರಿತ ನೈಜ ಘಟನೆ ಆಧರಿಸಿದ್ದು, ಚರಿತ್ರೆಯನ್ನು ಕಥೆಯ ರೂಪದಲ್ಲಿ ಹೇಗೆ ಕಟ್ಟಬಹುದು ಎಂಬುದಕ್ಕೆ ಮಾದರಿಯಾಗಿದೆ.

-ಚಂದ್ರಕಾಂತ ಕರದಳ್ಳಿ, ಶಹಾಪುರ/ ಪಿ.ಎಸ್.ಕನಮಡಿ, ಮುದ್ದೇಬಿಹಾಳ

### ಫ್ಲಾಷ್‌ಬ್ಯಾಕ್ ಅನಗತ್ಯ

'ಕೆಂಡ ಸಂಪಿಗೆ' ನೈಜಘಟನೆ ಆಧರಿಸಿದ ಸಣ್ಣಕಥೆಯಲ್ಲಿ ಫ್ಲಾಷ್‌ಬ್ಯಾಕ್ ತಂತ್ರ ಬೇಕಿರಲಿಲ್ಲ. ಹಠಾತ್ ಆಗಿ, ತುಸು ಗೊಂದಲದಲ್ಲಿ ಕಥೆ ಮುಗಿದಂತೆ ಎನಿಸಿತು.

-ರುದ್ರೇಶ್ ಬಿ. ಅದರಂಗಿ, ಕೋಲಾರ

### ಕಣ್ಣು ತುಂಬಿ ಬಂತು

'ಸಾಮಾನ್ಯರು ಸದಾ ಬಡವರು' ಶಿಕಾಕು ವಿಚಾರ ಲಹರಿ ಓದಿ ಕಣ್ಣಾಲಿಗಳು ತುಂಬಿಬಂದವು.

-ಮಲ್ಲಿಕಾರ್ಜುನ ಗಚ್ಚಿ, ಗೋಗಿ

### ಸದಾ ಮಧುರ

ನಿಸರ್ಗದ ಮಡಿಲಿನಂತೆ; ಮಂಜಿನ ಹನಿಯಂತೆ
ಕೋಗಿಲೆಯ ಧ್ವನಿಯಂತೆ; ಸೂರ್ಯನ ಬೆಳಕಿನಂತೆ
ಜೇನಿನ ಸವಿಯಂತೆ; ಸುಮಧುರ 'ಸುಧಾ' ಸಂಚಿಕೆ

-ಕೆ.ಆರ್. ಗೀತಾಂಜಲಿ, ಕೊಟ್ಟೂರು

---




ಬಾರಿನಲ್ಲಿ ಕೂತಿದ್ದ ಕುಡುಕನೊಬ್ಬ ತನ್ನ ಹೆಂಡ್ತಿಗೆ ಕಳಿಸಿದ ಮೆಸೇಜ್ ಹೀಗಿತ್ತು: 'ನಾನೀಗ ನನ್ನ ಕೊನೇ ಪೆಗ್ ಕುಡೀತಾ ಇದ್ದೀನಿ. ಇನ್ನರ್ಧ ಗಂಟೇಲಿ ಮನೇಲಿರ್ತೀನಿ. ಅಕಸ್ಮಾತ್ ಅಷ್ಟರೊಳಗೆ ನಾನು ಬಂದಿಲ್ಲಾಂದ್ರೆ ಇದೇ ಮೆಸೇಜ್‌ನ ಮತ್ತೊಂದು ಸಲ ಓದ್ಕೋ!'

★★★

ಪ್ರತಿ ಭಾನುವಾರ ಬೆಳಿಗ್ಗೆ ಹನ್ನೊಂದು ಗಂಟೆಗೆ ಆ ದೊಡ್ಡಾಸ್ಪತ್ರೆಯ ಐಸಿಯುನ ಹದಿಮೂರನೇ ಬೆಡ್ ಮೇಲಿದ್ದ ರೋಗಿಗಳು ಪ್ರಾಣ ಬಿಡ್ತಿದ್ರು. ಆಸ್ಪತ್ರೆಯ ವೈದ್ಯರು, ದಾದಿಯರೆಲ್ಲರಿಗೂ ಇದಕ್ಕೆ ಕಾರಣವೇ ತಿಳಿಯಲಿಲ್ಲ. ಕೊನೆಗೆ ಈ ನಿಗೂಢ ರಹಸ್ಯವನ್ನು ಬೇಧಿಸಲು ಒಂದು ತಂಡವೇ ಸಿದ್ಧವಾಯಿತು. ಮತ್ತೊಂದು ಭಾನುವಾರ, ಬೆಳಗಿನ ಹನ್ನೊಂದು ಬಾರಿಸಿತು. ವೈದ್ಯರು, ದಾದಿಯರೆಲ್ಲ ಅದೇ ಹದಿಮೂರನೇ ಬೆಡ್‌ನ ಸುತ್ತ ನಿಂತಿದ್ದರು. ಅಷ್ಟರಲ್ಲಿ.. ಕಸಗುಡಿಸುವ ಮುನಿಯಮ್ಮ (ವಾರದ ಪಾಳಿಯಲ್ಲಿ ಕೆಲಸ ಮಾಡುವಾಕೆ) ಅಲ್ಲಿಗೆ ಬಂದವಳೇ.. ಬೆಡ್ ಮೇಲೆ ಮಲಗಿದ್ದ ರೋಗಿಗೆ ಹಾಕಿದ್ದ ಉಪಕರಣದ ಪ್ಲಗ್ ಕಿತ್ತು ತನ್ನ ಮೊಬೈಲ್ ಚಾರ್ಜರ್ ಸಿಕ್ಕಿಸಿದಳು!

★★★

ಗುಂಡ ಎಫ್‌ಎಂ ರೇಡಿಯೋ ಸ್ಟೇಷನ್‌ಗೆ ಫೋನ್ ಮಾಡಿದ: 'ಸರ್ ನನಗೊಂದು ಪರ್ಸ್ ಸಿಕ್ಕಿದೆ. ಅದರೊಳಗೆ ಹತ್ತು ಸಾವಿರ ಕ್ಯಾಶ್ ಇದೆ...'
ಆರ್ಜೆ: ವೆರಿ ಗುಡ್, ಪರ್ಸ್ ಕಳ್ಕೊಂಡಿರೊರ್‍ಗೆ ವಾಪಾಸ್ ತಲುಪಿಸೋ ನಿಮ್ಮ ಈ ಔದಾರ್ಯ ಎಲ್ರೂ ಮೆಚ್ಚಬೇಕಾದದ್ದೇ..'
ಗುಂಡ: ಅಯ್ಯೋ.. ಹಾಗೇನೂ ಇಲ್ಲ ಸರ್. ಪರ್ಸ್ ಕಳ್ಕೊಂಡು ದುಃಖದಲ್ಲಿರೋ ಆ ವ್ಯಕ್ತಿಗಾಗಿ ದಯವಿಟ್ಟು ಒಂದು ಶೋಕಗೀತೆ ಬಜಾಯ್ಸಿ..'

★★★

ಟಿ.ವಿ. ನೋಡುತ್ತ ಕುಸಿದುಬಿದ್ದಿರುವ ಷೇರು ದರಗಳನ್ನು ನೋಟ್ ಮಾಡಿಕೊಳ್ಳುತ್ತಿದ್ದ ಶೇರ್ ಬ್ರೋಕರ್, ಅಷ್ಟರಲ್ಲಿ ಆತನ ಕೆಲಸದಾಳು ಓಡಿಬಂದು ಒಳ ನುಗ್ಗಿದ–
'ಸಾರ್, ಮೇಡಂ ಕುಸಿದು ಬಿದ್ದಿದ್ದಾರೆ..'
ಎಂದ ಆತಂಕದಿಂದ.
ಬ್ರೋಕರ್ ಟೀವಿ ನೋಡುತ್ತಲೇ ಅಂದ, 'ಓ ಹೌದಾ? ಹಾಗಾದ್ರೆ ತಕ್ಷಣ ಮಾರೋಣ ಬಿಡು...!'



ಸಂಗ್ರಹ: ಅನುಪಲ್ಲವಿ, ಮೂಡುಬಿದರೆ